ತಾಲ್ಲೂಕು ಕೇಂದ್ರವನ್ನಾಗಿ ಘೋಷಣೆ ಮಾಡಿರುವುದು

899 (1598); ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)

ಅ) ಕೊಟ್ಟೂರು ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಣೆ ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ ತಾಲ್ಲೂಕು ಕೇಂದ್ರಕ್ಕೆ ನೀಡಲಾಗುವ ಸ್ಥಾನಮಾನ/ಸವಲತ್ತುಗಳನ್ನು ನೀಡಲಾಗಿದೆಯೇ;

ಇ) ಕೊಟ್ಟೂರಿಗೆ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ (ವಿವರಗಳನ್ನು ನೀಡುವುದು)

ಈ) ಇದುವರವಿಗೂ ಯಾವುದೇ ಸೌಲಭ್ಯಗಳನ್ನು ಒದಗಿಸದೇ ಇರಲು ಕಾರಣಗಳೇನು?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ರಾಜ್ಯ ಸರ್ಕಾರವು ಇದುವರೆಗೆ ಯಾವುದೇ ಆದೇಶ ಹೊರಡಿಸಿರುವುದಿಲ್ಲ.

ಆ) ಮತ್ತು (ಇ) ಉದ್ಭವಿಸುವುದಿಲ್ಲ.

ಸಿಂಧಗಿ ಮತಕ್ಷೇತ್ರ ವ್ಯಾಪ್ತಿಯ ಕಾಮಗಾರಿಗಳಿಗೆ ಒದಗಿಸಿದ ಅನುದಾನ

901 (1290); ಶ್ರೀ ಭೂಸನೂರ ರಮೇಶ್ ಬಾಳಪ್ಪ

ಅ) ವಿಜಾಪುರ ಜಿಲ್ಲೆಯ ಸಿಂದಗಿ ಕ್ಷೇತ್ರಕ್ಕೆ 2012–13 ಹಾಗೂ 2013–14ನೇ ಸಾಲಿನಲ್ಲಿ ವಿವಿಧ ಯೋಜನೆಯಡಿಯಲ್ಲಿ ಒದಗಿಸಿದ ಅನುದಾನವೆಷ್ಟು (ವಿವರವಾದ ಮಾಹಿತಿ ಒದಗಿಸುವುದು);

ಆ) ಹಾಗಿದ್ದಲ್ಲಿ, ಒದಗಿಸಿದ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳು ಪೂರ್ಣಗೊಂಡಿವೆ (ಮಾಹಿತಿ ಒದಗಿಸುವುದು);